ಯುದ್ಧಗಳು, ಒಪ್ಪಂದಗಳು, ಕಾಲಮಾನ, ಭಾಷಾ ವಿಷಯಗಳ ವ್ಯಾಕರಣದ ಅಂಶಗಳ ಚಾರ್ಟ್ ಮಾಡಿಕೊಳ್ಳಬೇಕು.

### ವೇಳಾಪಟ್ಟಿ ಮತ್ತು ಅನುಷ್ಠಾನ

ಪಠ್ಯ ಪರಿಚಯ ವೇಳಾಪಟ್ಟಿ ಹಾಗೂ ಸಮಯ ಪರಿಪಾಲನೆಯನ್ನು ನಿತ್ಯವೂ ಮಾಡಬೇಕು. ತರಗತಿಗಳು ಪ್ರಾರಂಭವಾಗುವ ಮುನ್ನವೇ ವಿದ್ಯಾರ್ಥಿಗಳು ಪಠ್ಯ ಪರಿಚಯ ಮಾಡಿಕೊಳ್ಳಬೇಕು. ತಮ್ಮ ಸಮಯಕ್ಕೆ ತಕ್ಕಂತೆ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳಬೇಕು.

### ಟಿಪ್ಪಣಿ ಮಾಡಿಕೊಳ್ಳಿ

ಖಾಸಗಿ ವ್ಯಕ್ತಿಗಳು ಸಿದ್ಧಪಡಿಸುವ ಗೈಡ್‌ಗಳಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯೋಗವೇನೂ ಇಲ್ಲ. ಪುಸ್ತಕ ಓದಿ ಸ್ವಂತ ನೋಟ್ಸ್ ಅಥವಾ ಟಿಪ್ಪಣಿ ಮಾಡಿಕೊಳ್ಳುವುದು ಅತ್ಯುತ್ತಮ ವಿದ್ಯಾರ್ಥಿಯ ಲಕ್ಷಣ.

ಹೆಚ್ಚು ಅಂಕಗಳಿಸಲು ಆರಂಭದಿಂದಲೇ ಓದಬೇಕು ಎಂದು ಯಾರಾದರೂ ಪ್ರಶ್ನಿಸಿದರೆ, ಹೌದು ಎನ್ನುವುದೇ ಸರಿಯಾದ ಉತ್ತರ. 'ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ' ಎಂಬಂತೆ ಪರೀಕ್ಷಾ ಸಮಯದದಲ್ಲಿ ಆರಂಭಿಸುವ ಓದು ಎಂದೂ ಸಾಧುವಲ್ಲ. ಬಿಡಿ ಬಿಡಿ ಭಾಗವನ್ನು ಅರ್ಥಮಾಡಿಕೊಂಡು ಪ್ರಮುಖ ಅಂಶಗಳ ಟಿಪ್ಪಣಿ ಮಾಡಿಕೊಳ್ಳುವುದು ಪರಿಶ್ರಮವನ್ನು ಸರಳಗೊಳಿಸುತ್ತದೆ. ಪರೀಕ್ಷಾ ಸಮಯದಲ್ಲಿ ಕಷ್ಟಪಡುವ ಪ್ರಮೇಯ ಬರುವುದಿಲ್ಲ.

### ಎಷ್ಟು ಸಮಯ ಓದಬೇಕು?

ಎಷ್ಟು ಸಮಯ ಓದಬೇಕು ಎನ್ನುವುದಕ್ಕಿಂತ ಎಷ್ಟರ ಮಟ್ಟಿಗೆ ಓದುವುದರಲ್ಲಿ ಏಕಾಗ್ರತೆಯಿಂದ ತೊಡಗಿಕೊಂಡಿದ್ದೇವೆ ಎನ್ನುವುದು ಮುಖ್ಯ. ಕೆಲವು ವಿದ್ಯಾರ್ಥಿಗಳು ಪುಸ್ತಕಗಳೊಂದಿಗೆ ಹೆಚ್ಚು ಸಮಯ ಕಳೆಯುತ್ತಾರೆ. ಆದರೆ, ಅವರಿಗೆ ಏಕಾಗ್ರತೆ ಇರುವುದಿಲ್ಲ. ಕೆಲವರು ಓದುವ ಸಮಯ ಕಡಿಮೆ. ಆದರೆ, ಏಕಾಗ್ರತೆಯಿಂದಾಗಿ ಅವರು ಹೆಚ್ಚಿನ ಯಶಸ್ಸು ಪಡೆಯುತ್ತಾರೆ. ಕಡಿಮೆ ಸಮಯದಲ್ಲೇ ಆಸಕ್ತಿಯಿಂದ ಓದಿ ಪಠ್ಯಗಳನ್ನು ಅರ್ಥಮಾಡಿಕೊಳ್ಳುತ್ತಾರೆ.

ಪ್ರತಿದಿನ 5ರಿಂದ 6 ಗಂಟೆಗಳ ಕಾಲ ಶ್ರದ್ಧೆಯಿಂದ ಅಭ್ಯಾಸದಲ್ಲಿ ತೊಡಗಿಸಿಕೊಂಡರೆ ಪರೀಕ್ಷೆಯನ್ನು ಸಮರ್ಥವಾಗಿ ಎದುರಿಸಬಹುದು. ಯಾವ ಸಮಯದಲ್ಲಿ ಯಾವ ಪಠ್ಯ ಓದಬೇಕು ಎನ್ನುವುದನ್ನು ವಿದ್ಯಾರ್ಥಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ನಿರ್ಧರಿಸಿಕೊಳ್ಳಬೇಕು. ಕಷ್ಟ ಎನಿಸುವ ವಿಷಯಗಳನ್ನು ಪ್ರಶಾಂತವಾದ ಸಮಯದಲ್ಲೇ ಓದಬೇಕು. ಸುಲಭದ ವಿಷಯಗಳಿಗೆ ಮಿಕ್ಕ ಸಮಯವನ್ನು ವಿನಿಯೋಗಿಸಬಹುದು. ಒಟ್ಟಾರೆ ಪ್ರತಿದಿನವೂ ಪ್ರತಿ ವಿಷಯವನ್ನೂ ಓದಬೇಕು. ಎಲ್ಲದಕ್ಕೂ ಪ್ರಾಮುಖ್ಯತೆಯನ್ನು ನೀಡಬೇಕು.

### ಟ್ಯೂಷನ್ ಬೇಕಾ?

ಶಾಲಾಕಾಲೇಜಿಗೆ ಸೇರಿಕೊಳ್ಳುವುದಕ್ಕೆ ಮೊದಲೇ ವಿದ್ಯಾರ್ಥಿಗಳು ಮತ್ತು ಪೋಷಕರು ಮನೆಪಾಠದ ಬಗ್ಗೆ ಯೋಚಿಸತೊಡಗುತ್ತಾರೆ. ಶಾಲಾಕಾಲೇಜು ಶುಲ್ಕಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಟ್ಯೂಷನ್‌ಗೆ ಕೊಡುವವರೂ ಇದ್ದಾರೆ. ಮನೆಪಾಠದ ಅವಶ್ಯಕತೆ ಇದೆಯಾ ಎನ್ನುವುದು ಚರ್ಚೆಯ ವಿಷಯ. ಕೆಲವರಿಗೆ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಬೋಧನೆ ಬೇಕಾಗುತ್ತದೆ. ಕೆಲವರಿಗೆ ಮನೆಪಾಠದ ಅಗತ್ಯ ಬೀಳುವುದಿಲ್ಲ.

ತರಗತಿಗಳಲ್ಲಿ ಕೆಲವು ವಿಷಯಗಳ ಶಿಕ್ಷಕರಿಲ್ಲದಿದ್ದಾಗ ಅಥವಾ ಪರಿಣಾಮಕಾರಿ ಮಾರ್ಗದರ್ಶನ ಸಿಗದಿದ್ದರೆ ಅಂತಹ ವಿಷಯಗಳಿಗೆ ಮನೆಪಾಠ ಅವಶ್ಯವಾಗುತ್ತದೆ. ಆದರೆ, ಮಕ್ಕಳನ್ನು ಟ್ಯೂಷನ್‌ಗೆ ಕಳಿಸುವ ಪೋಷಕರು ಎರಡು ಸಂಗತಿಗಳನ್ನು ಗಮನಿಸಬೇಕು. ಒಂದು, ಟ್ಯೂಷನ್ ತಮ್ಮ ಮಗುವಿಗೆ ಎಷ್ಟು ಅಗತ್ಯ ಎನ್ನುವುದನ್ನು ಕಂಡುಕೊಳ್ಳುವುದು. ಅಗತ್ಯ ಎಂದಾದಲ್ಲಿ, ಟ್ಯೂಷನ್‌ಗೆ ಹೋಗುವಷ್ಟು

## ಸ್ಪಷ್ಟ ಗುರಿ, ಯಶಸ್ಸಿಗೆ ದಾರಿ



**ಎಸ್‌.ಎಂ. ಕೌಶಿಕ್**
ತಂದೆ: ಎಸ್‌.ಸಿ. ಮುರಳೀನಾಥ
ತಾಯಿ: ಎಸ್‌.ಎಂ. ಸುಜಾತಾ
ಅಂಕ: 596 (ಪಿಯುಸಿ–ವಿಜ್ಞಾನ)
ವಿದ್ಯಾಸಂಸ್ಥೆ: ಗಂಗೋತ್ರಿ ಪಿಯು ಕಾಲೇಜು, ಶ್ರೀನಿವಾಸಪುರ

**ಗೆದ್ದವರ ಮಾತು**

ಕೋಲಾರ ಜಿಲ್ಲೆಯ ಶ್ರೀನಿವಾಸಪುರ 'ಗಂಗೋತ್ರಿ ಪಿಯು ಕಾಲೇಜಿ'ನಲ್ಲಿ ಓದಿದೆ. ಇಂಟಿಗ್ರೇಟೆಡ್ ಕಾಲೇಜು ಆಗಿದ್ದರಿಂದ ಹೆಚ್ಚಿನ ಸಮಯ ಕಾಲೇಜಿನಲ್ಲೇ ಕಳೆಯುತ್ತಿದ್ದೆ. ಬೆಳಿಗ್ಗೆ 9ಕ್ಕೆ ಹೋದರೆ ಸಂಜೆ 5ರ ತನಕ ಅಲ್ಲೇ ಇರ್ತಾ ಇದ್ದೆ. ಸಾಮಾನ್ಯವಾಗಿ ಸಂಜೆಯೂ ತರಗತಿ ಇರುತ್ತಿದ್ದವು. ಮನೆಗೆ ಬಂದ ಮೇಲೆ ಒಂದು ಗಂಟೆ ಆರಾಮಾಗಿ ಇರುತ್ತಿದ್ದೆ. ನಂತರ ಒಂದಿಷ್ಟು ಅಭ್ಯಾಸ. ನಿರಂತರವಾಗಿ ಒಂದೇ ರೀತಿ ಓದುವ ಕ್ರಮ ರೂಢಿಸಿಕೊಂಡಿದ್ದೆ. ಒಂದು ದಿನ ಓದುವುದು, ಮತ್ತೊಂದು ದಿನ ಬಿಡುವುದು ಸರಿಯಲ್ಲ. ನಿಗದಿಯಂತೆ ದಿನವೂ ಸ್ವಲ್ಪ ಸ್ವಲ್ಪ ಅಭ್ಯಾಸ ನಾನು ಅನುಸರಿಸಿದ ಕ್ರಮ. ಒಂದೇ ದಿನ ಹೆಚ್ಚು ಓದುವುದು ಕಷ್ಟ. ಓದದೇ ಇರುವುದೂ ತಪ್ಪು. ಪಿಯು ಬೋರ್ಡ್‌ನ ಮುಖ್ಯ ಪರೀಕ್ಷೆಗೆ ಹೆಚ್ಚು ತಲೆ ಬಿಸಿ ಮಾಡಿಕೊಳ್ಳುವ ಅಗತ್ಯ ಇಲ್ಲ. ದಿನದಲ್ಲಿ ಒಂದು ಗಂಟೆ ಸರಿಯಾಗಿ ಓದಿದರೂ ಸಾಕು. 'ನೀಟ್', 'ಜೆಇಇ', 'ಸಿಇಟಿ' ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಹೆಚ್ಚಿನ ಸಮಯ ಕೊಡಬೇಕಾಗುತ್ತದೆ. ನಮ್ಮ ಗುರಿಯನ್ನು ಗುರುತಿಸಿ ಪ್ಲಾನ್ ಮಾಡಿಕೊಳ್ಳಬೇಕು.

ನಮಗೆ ಪ್ರತಿವಾರ ಟೆಸ್ಟ್ ಇರುತ್ತಿತ್ತು. ಕಾಲೇಜಿನಲ್ಲಿ ಸಿದ್ಧತೆ ಬಗ್ಗೆ ಷೆಡ್ಯೂಲ್ ರೂಪಿಸಿ ಕೊಡುತ್ತಿದ್ದರು. ಅದರಂತೆ ತಯಾರಾಗುತ್ತಿದ್ದೆ. ಪ್ರತ್ಯೇಕವಾಗಿ ಟ್ಯೂಷನ್‌ಗೆ ಹೋಗಿಲ್ಲ. ನಮ್ಮ ಕಾಲೇಜಿನ ಅಧ್ಯಾಪಕರೇ ಸಹಾಯ ಮಾಡುತ್ತಿದ್ದರು. ಫೋನ್ ಮಾಡಿದರೂ ಗೊಂದಲಗಳನ್ನು ಬಗೆಹರಿಸುತ್ತಿದ್ದರು. ನಮ್ಮದು ಕೋವಿಡ್ ಬ್ಯಾಚ್. ಮೊದಲ ವರ್ಷ ಸ್ಪರ್ಧಾತ್ಮಕವಾಗಿ ಓದಲು ಆಗಿರಲಿಲ್ಲ. ಎರಡನೇ ವರ್ಷದ ತರಗತಿ ಆರಂಭ ಆಗುತ್ತಿದ್ದಂತೆ ಓದಲು ಆರಂಭಿಸಿದೆ. ಯಾವತ್ತೂ ಬಾಕಿ ಇಟ್ಟುಕೊಳ್ಳುತ್ತಿರಲಿಲ್ಲ.

ಕ್ರಿಕೆಟ್ ಎಂದರೆ ನನಗೆ ಪಂಚಪ್ರಾಣ. ಹೈಸ್ಕೂಲ್ ದಿನಗಳಲ್ಲಿ ಕ್ರಿಕೆಟ್ ಆಡುತ್ತಿದ್ದೆ. 14 ವರ್ಷದೊಳಗಿನವರ, 16 ವರ್ಷದೊಳಗಿನವರ ರಾಜ್ಯಮಟ್ಟದ ಪಂದ್ಯಾವಳಿಯಲ್ಲಿ ಆಡಿರುವೆ. ದಕ್ಷಿಣ ಭಾರತ ವಲಯ ಮಟ್ಟದ ಖಾಸಗಿ ಟೂರ್ನಮೆಂಟ್ ಆಡಿರುವೆ. ಪಿಯುಸಿಯಲ್ಲಿ ಎರಡು ವರ್ಷ ಆಡುವುದನ್ನೇ ಬಿಟ್ಟೆ. ಮತ್ತೆ ಆರಂಭಿಸಬೇಕು ಎಂದುಕೊಂಡಿರುವೆ. ಎಂಜಿನಿಯರಿಂಗ್ ಮಾಡಿ ಮಾಸ್ಟರ್ಸ್‌ನಲ್ಲಿ ಏರೋ ಸ್ಪೇಸ್ ಮಾಡುವ ಆಸೆ ಇದೆ.

ನನ್ನ ಪ್ರಕಾರ ಇಷ್ಟಪಟ್ಟು ನಿರಂತರ ಓದುವುದು ಒಳ್ಳೆಯ ಅಭ್ಯಾಸ. ಪೋಷಕರು ಮಕ್ಕಳ ಮೇಲೆ ಒತ್ತಡ ಹೇರಬಾರದು. ಮನೆಯಲ್ಲಿ ಒತ್ತಡವಿರುವ ಸಹಪಾಠಿಗಳನ್ನು ನಾನೇ ನೋಡುತ್ತಿದ್ದೆ. ತರಗತಿಯ ಕಿರುಪರೀಕ್ಷೆಯಲ್ಲಿ ಒಂದೆರಡು ಅಂಕ ಕಡಿಮೆ ಬಂದರೂ, ಏಕೆ? ಏನು? ಎಂದು ದಬಾಯಿಸುತ್ತಿದ್ದರು. ನಮ್ಮ ಮನೆಯಲ್ಲಿ ಸಹಕಾರ ಇತ್ತೇ ಹೊರತು ಒತ್ತಡ ಇರಲಿಲ್ಲ. ಇಷ್ಟೇ ಅಂಕ ಬರಬೇಕು ಎಂದು ಹೇಳುತ್ತಿರಲಿಲ್ಲ. ನನ್ನ ಕೆಲಸ ನಾನು ಮಾಡುತ್ತಿದ್ದೆ. ಅಪ್ಪ ನಾನು ಓದುವ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರು. ಆದರೂ ಅವರು ಒತ್ತಡ ಹೇರಲಿಲ್ಲ.

ಅಧ್ಯಾಪಕರ ನಿರ್ದೇಶನದಂತೆ ಓದಿದರೆ ಒಳ್ಳೆಯ ಅಂಕಗಳನ್ನು ಗಳಿಸಬಹುದು. ಅಷ್ಟಕ್ಕೂ ಗೊಂದಲ, ಸಮಸ್ಯೆಗಳು ಇದ್ದರೆ ಆನ್‌ಲೈನ್‌ನಲ್ಲಿ ಬೇಕಾದಷ್ಟು ಯೂಟ್ಯೂಬ್ ಲಿಂಕ್‌ಗಳು ಸಿಗುತ್ತವೆ. ಸೆಲ್ಫ್ ಸ್ಟಡಿ ಮಾಡಿಯೇ ಗರಿಷ್ಠ ಅಂಕಗಳನ್ನು ಖಂಡಿತ ಪಡೆಯಬಹುದು. ಹಿಂದಿನ ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸುವ ಅಭ್ಯಾಸದಿಂದ ಹೆಚ್ಚು ಪ್ರಯೋಜನ ಆಗುತ್ತದೆ.